# ಸ್ಪರ್ಶ ಶಿಲೆ

ಹೇಗೆ ಉತ್ತರಿಸುವುದು?
ಇದೆಂತಹ ಕಲ್ಲು? ಯಾವ ಬಣ್ಣ? ಏನು ರೂಪ?
ಎಂದರೇ...

ಖಾರ ಅರೆದರೆದು ಕೆಂಪಾದ ಕಲ್ಲೋ?
ಒಗೆದೊಗೆದು ಬಟ್ಟೆ ಸವೆದ ಕಲ್ಲೋ?
ನಿಟ್ಟುಸಿರಿಟ್ಟ ಜಗುಲಿಕಟ್ಟೆಯ ಕಲ್ಲೋ?
ಮನೆಯ ಮುಂದಿನ ಚರಂಡಿಯ ಹೊಲಸು
ಮುಚ್ಚಿ ಮೌನವಾದ ಕಲ್ಲೋ?
ಏನೆಂದು ಉತ್ತರಿಸುವುದು?


ಕೆಲವಕ್ಕೆ ಅಡುಗೆ ಮನೆಯೇ ಅಂತಃಪುರ
ಉರಿದುರಿದು ಬೆಂಕಿಯ ಮುಂದೆ ಮೈಮುಖ
ಕುಟ್ಟಿ ಕೇರಿ ಹೊಟ್ಟು ತೆಗೆದು ರಸಪಾಕ
ಬೇಯಿಸಿ ಬಿಡಿಸಿ ಹೊತ್ತು ಹೊತ್ತಿಗೆ
ಸಮಾಧಾನದ ತೇಗು ಪಂಕ್ತಿ ಸಾಲಿಗೆ

ಮುಟ್ಟಿನ ನೋವೋ ಮುಟ್ಟದ ನೆನಹೋ
ಒಟ್ಟೆನಲ್ಲಿ ಸೌದೆ ಮುಂದೆ ನಿಗಿನಿಗಿ ಅನ್ನ
ಉಕ್ಕುಕ್ಕಿ ಸುರಿದ ಹಾಲಿನ ಮುಂದೆ
ಕಾದು ಬೆಂದು ತುಟಿ ಮೇಲೆ ಅಂತೂ ನಗು
ಒಳಗೆ ಸಣ್ಣ. ...ಗೆ ಸೋನೆಮಳೆ ಜಿನುಗು

ಸೋತು ಗೆಲ್ಲುವ ಕಲೆಯ ತೆಕ್ಕೆಗೀಗ
ಅಡುಗೆ ಮನೆಯ ಜೊತೆಗೇ, ಆಫೀಸು
ರಾಜಕಾರಣ ರಾಯಭಾರ ಅಂತರಿಕ್ಷ ಯಾನ
ಬೆವರ ಬಸಿರಲ್ಲೂ ಒಲಿದ ಆತ್ಮಸಮ್ಮಾನ
ಹಗಲು ರಾತ್ರಿಯ ಪಾಳಿಗಳಿಗೂ ಸ್ವರ್ಣಲೇಪ
ಮುಟ್ಟಿ ಮುತ್ತಿಟ್ಟದ್ದನ್ನೆಲ್ಲಾ ಹೊಳೆಯಿಸುವ
ಮಾಯಾರೂಪ!

ಹೇಗೆ ಉತ್ತರಿಸುವುದು?
ಇದೆಂತಹಾ ಕಲ್ಲು? ಯಾವ ಬಣ್ಣ? ಏನು ರೂಪ?
ಎಂದರೆ?!...

● **ಕೆ.ಎನ್. ಲಾವಣ್ಯ ಪ್ರಭಾ**



ವಾಗೀಶ ಹೆಗಡೆ